- 2000 ಇಸವಿಯಲ್ಲಿ ಎರಡನೆಯ ರಾಷ್ಟ್ರೀಯ ಜನಸಂಖ್ಯೆ ನೀತಿಯನ್ನು ಜಾರಿಗೆ ತಂದ ಕೇಂದ್ರ ಸರ್ಕಾರ, ಕೌಟುಂಬಿಕ ಆರೋಗ್ಯ ಪಡೆಯಲು ಜನ ತಮಗೆ ಬೇಕಾದ ಸಂತಾನ ನಿಯಂತ್ರಣ ಕ್ರಮಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ಹೇಳಿ 'ಕುಟುಂಬ ಚಿಕ್ಕದಿರಲಿ' ಎಂಬ ಸಂದೇಶ ರವಾನಿಸಿತ್ತು. ಆದರೆ, ಚಿಕ್ಕ ಕುಟುಂಬ ಎಂದರೆ ಎರಡೇ ಮಕ್ಕಳಿರುವ ಕುಟುಂಬ ಎಂದು ನೀತಿಯಲ್ಲಿ ಎಲ್ಲೂ ಹೇಳಿರಲಿಲ್ಲ. ಗರ್ಭನಿರೋಧಕಗಳ ಬಳಕೆ ಮತ್ತು ಶಸ್ತ್ರಚಿಕಿತ್ಸೆಗಳ ಕಡೆ ಮಾತ್ರ ಗಮನ ಹರಿಸಿದ ಸರ್ಕಾರ 2010ರ ವೇಳೆಗೆ ಫಲವತ್ತತೆಯ ದರವನ್ನು 2.1ಕ್ಕೆ ತರುವ ಪ್ರಯತ್ನದ ಕಡೆ ಹೆಚ್ಚು ಪ್ರಾಶಸ್ತ್ಯ ನೀಡಿತ್ತು.

## ನಿಯಂತ್ರಣಕ್ಕೆ ಪಕ್ಷಾತೀತ ಪ್ರಯತ್ನ

2016ರ ಸೆಪ್ಟೆಂಬರ್‌ನಲ್ಲಿ ಆಡಳಿತಾರೂಢ ಬಿಜೆಪಿಯ ಲೋಕಸಭಾ ಸದಸ್ಯ ರಾಕೇಶ್ ಸಿನ್ಹ, ಜನಸಂಖ್ಯಾ ನಿಯಂತ್ರಣದ ಬಗ್ಗೆ ಕಾನೂನು ರೂಪಿಸಲು ಖಾಸಗಿ ವಿಧೇಯಕವನ್ನು ರಾಜ್ಯಸಭೆಯ ಕಲಾಪದಲ್ಲಿ ಮಂಡಿಸಿ, 'ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವ ಕುಟುಂಬಗಳಿಗೆ ದಂಡ ಹಾಕಬೇಕು' ಎಂದು ಹೇಳಿದಾಗ ಬಹುಪಾಲು ಸದಸ್ಯರು ಅದನ್ನು ವಿರೋಧಿಸಿದ್ದರು. ಆದರೆ ಸಭೆಯಿಂದಾಚೆ ಬೆಂಬಲದ ಮಾತನಾಡಿದ ವಿರೋಧಪಕ್ಷದ ಸದಸ್ಯರು, 'ಅಂತಹ ಕಾನೂನಿನ ಅಗತ್ಯವಿದೆ. ಆದರೆ ಅದನ್ನು ಜಾರಿ ಮಾಡಲು ಇರುವ ತೊಡಕುಗಳ ಬಗ್ಗೆ ಗಮನಹರಿಸಬೇಕು' ಎಂದಿದ್ದರು.

ಜನಸಂಖ್ಯಾ ಸ್ಫೋಟ ದೇಶದ ಪರಿಸರ ಮತ್ತು ಸಂಪನ್ಮೂಲಗಳ ಮೇಲೆ ಸರಿಪಡಿಸಲಾಗದ ಅಡ್ಡ ಮತ್ತು ದೀರ್ಘಕಾಲದ ಪರಿಣಾಮಗಳನ್ನು ಉಂಟುಮಾಡುತ್ತದೆ. ಮುಂದಿನ ಪೀಳಿಗೆಯ ಅವಕಾಶ ಮತ್ತು ಪ್ರಗತಿಯನ್ನು ಮೊಟಕುಗೊಳಿಸುತ್ತದೆ. ಆದ್ದರಿಂದ ಸರ್ಕಾರಿ ಕೆಲಸದಲ್ಲಿರುವವರು ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವಂತಿಲ್ಲ ಮತ್ತು ಕಲ್ಯಾಣ ಯೋಜನೆಗಳ ಲಾಭ ಪಡೆಯುವ ಬಡವರು ಕುಟುಂಬ ನಿಯಂತ್ರಣ ಯೋಜನೆ ಪಾಲಿಸದಿದ್ದರೆ ಯೋಜನೆಯ ಪ್ರಯೋಜನವನ್ನು ಹಿಂಪಡೆಯಲಾಗುವುದು ಎಂಬುದು ವಿಧೇಯಕದಲ್ಲಿತ್ತು. ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದಲ್ಲಿ ಹೆರಿಗೆ ಕೇಂದ್ರವಿರಬೇಕು, ಪ್ರತಿ ಮಹಿಳೆಗೂ ಹೆಲ್ತ್ ಕಾರ್ಡ್, ಉಚಿತ ಆರೋಗ್ಯ ತಪಾಸಣೆ, ಕೌನ್ಸೆಲಿಂಗ್ ಸೌಲಭ್ಯ ಸಿಗಬೇಕು ಮತ್ತು ಎರಡೇ ಮಕ್ಕಳನ್ನು ಹೊಂದಿದ್ದರೆ ಎಲ್ಲ ಯೋಜನೆಗಳ ಲಾಭ ಮುಕ್ತವಾಗಿ ಹಾಗೂ ಶೀಘ್ರವಾಗಿ ಸಿಗಬೇಕು ಎಂಬ ಅಂಶಕ್ಕೆ ಪ್ರಾಧಾನ್ಯತೆ ನೀಡಲಾಗಿದೆ.

ವಿಧೇಯಕ ಮಂಡನೆಯಾಗುವುದಕ್ಕಿಂತ ಮಂಚೆ ಮೇ ತಿಂಗಳಿನಲ್ಲಿ ಬಿಜೆಪಿಯ ನಾಯಕ ಅಶ್ವಿನ್ ಕುಮಾರ್ ಜನಸಂಖ್ಯೆ ನಿಯಂತ್ರಣಕ್ಕೆ ಕಾಯಿದೆ ರೂಪಿಸಲು

## ಹೆಣ್ಣು: ದೇಶ ಮತ್ತು ಸಂಸಾರದ ಕಣ್ಣು

ಶಾಲೆ ಕಲಿತ ಹೆಣ್ಣುಮಕ್ಕಳು ನಿಜವಾದ ಜನಸಂಖ್ಯಾ ನಿಯಂತ್ರಕರು ಎಂಬುದು ಅಧ್ಯಯನಗಳಿಂದ ಸಾಬೀತಾಗಿದೆ. ಶಿಕ್ಷಣ ಗಳಿಸಿದ ಹೆಣ್ಣುಮಕ್ಕಳು, ಆರ್ಥಿಕವಾಗಿ ಸಬಲರಾದೊಡನೆ, 'ಈಗಲೇ ಮದುವೆ ಬೇಡ, ಮಕ್ಕಳು ಬೇಡ' ಎಂದು ನಿರ್ಧರಿಸಿದ್ದರಿಂದ 'ಟಿಎಫ್‌ಆರ್' ಕಡಿಮೆಯಾಯಿತು ಎನ್ನುತ್ತಾರೆ ತಜ್ಞರು. ಗರ್ಭ ನಿರೋಧಕಗಳ ಬಳಕೆ, ಶುಚಿತ್ವ, ಮಕ್ಕಳ ನಡುವಿನ ಅಂತರಗಳ ಬಗ್ಗೆ ಸರಿಯಾದ ತಿಳಿವಳಿಕೆ ಪಡೆಯುವ ಮಹಿಳೆಯರು ತಮ್ಮ ಕುಟುಂಬದ ಆದಾಯಕ್ಕೆ ತಕ್ಕಂತೆ ಒಂದೋ ಎರಡೋ ಮಕ್ಕಳನ್ನು ಪಡೆಯಲು ಮುಂದಾಗುತ್ತಾರೆ. ಅದಕ್ಕೆ ಸಾಕ್ಷಿ ನಮ್ಮ ದೇಶದ ಕೇರಳ ಮತ್ತು ಪಂಜಾಬ್ ರಾಜ್ಯಗಳು. ಕೇರಳ ಪಂಜಾಬ್‌ಗಳ 'ಟಿಎಫ್‌ಆರ್' ಇದ್ದರೆ, ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ತಲಾ 3.4 ಮತ್ತು 2.7 ಇದೆ. ದೆಹಲಿ ಮೂಲದ ಎನ್‌ಜಿಒ 'ಪಾಪ್ಯುಲೇಶನ್ ಫೌಂಡೇಶನ್'ನ ಪೂನಮ್ ಮುತ್ರೇಜ,'ಹೆಣ್ಣು ಹೆಚ್ಚು ಕಲಿತಷ್ಟೂ ಜನಸಂಖ್ಯೆ ಕಡಿಮೆ ಇರುತ್ತದೆ' ಎನ್ನುತ್ತಾರೆ. ಶೇ 72.2 ರಷ್ಟು ಕೇರಳದ ಮಹಿಳೆಯರು ಹತ್ತರಿಂದ ಹನ್ನೆರಡನೆಯ ತರಗತಿವರೆಗೆ ವಿದ್ಯಾಭ್ಯಾಸ ಕಲಿತಿದ್ದಾರೆ, ಪಂಜಾಬ್‌ನಲ್ಲಿ ಶೇ 56 ಹೆಣ್ಣುಮಕ್ಕಳು ಶಾಲೆಯ ಶಿಕ್ಷಣ ಅರ್ಥಮಾಡಿಕೊಂಡಿದ್ದಾರೆ, ಹಾಗಾಗಿ ಆ ರಾಜ್ಯಗಳ 'ಟಿಎಫ್‌ಆರ್' ಅತ್ಯಂತ ಕಡಿಮೆ ಇದೆ. ಆದರೆ ಬಿಹಾರದಲ್ಲಿ ಶೇ 22.8 ಮತ್ತು ಉತ್ತರ ಪ್ರದೇಶದಲ್ಲಿ ಶೇ 32.9ರಷ್ಟು ಹೆಣ್ಣುಮಕ್ಕಳು ಮಾತ್ರ ಶಾಲೆಯ ಮುಖ ನೋಡಿದ್ದಾರೆ, ಆದ್ದರಿಂದ ಅಲ್ಲಿನ 'ಟಿಎಫ್‌ಆರ್' ದೇಶದ ಸರಾಸರಿಗಿಂತ ಮೇಲೆ ಇದೆ ಎಂಬುದು ಅಂಕಿಅಂಶಗಳಿಂದ ತಿಳಿದು ಬಂದಿದೆ. ಶಿಕ್ಷಣವಿರದ ಕಡೆ ಶೇ 3.1ರಷ್ಟು ಜನನ ಪ್ರಮಾಣವಿದ್ದರೆ, ಶಿಕ್ಷಣ ಪಡೆದವರಲ್ಲಿ ಅದು ಶೇ 1.7ರಷ್ಟಿದೆ. ಜೈಪುರದ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಮ್ಯಾನೇಜ್‌ಮೆಂಟ್ ರಿಸರ್ಚ್ ವಿವಿ'ಯ ದೇವೇಂದ್ರ ಕೊಠಾರಿ, 'ಕೇವಲ ಶೇ 24ರಷ್ಟು ಮಹಿಳೆಯರು ಎರಡನೇ ಮಗು ಬೇಕು ಎನ್ನುತ್ತಾರೆ, ಉಳಿದವರಿಗೆ ಒಂದೇ ಮಗು ಸಾಕು ಎಂಬ ಅಭಿಪ್ರಾಯವಿದೆ' ಎನ್ನುತ್ತಾರೆ. ಆದರೂ ಜನಸಂಖ್ಯೆ ಏರಿದೆಯಲ್ಲ ಎಂದು ಕೇಳಿದರೆ, 'ಶೇಕಡ 50ರಷ್ಟು ಮಕ್ಕಳು ಆಕಸ್ಮಿಕವಾಗಿ ಆದ ಗರ್ಭಧಾರಣೆಯಿಂದ ಜನಿಸುತ್ತಿವೆ ಎಂದು ಲೆಕ್ಕ ನೀಡುತ್ತಾರೆ.



ತುಂಬಿದ ಚೀನಾ ತುಳುಕುವುದಿಲ್ಲ: ಮಕಾವೊ ನಗರದಲ್ಲಿ ಕಿಕ್ಕಿರಿದಿರುವ ಪ್ರವಾಸಿಗರು